7. ಇನ್‌ಸಿನರೇಟರ್: ಕಂಪನಿಯವರಿಗೆ ರಿಪೇರಿ ಕಾರ್ಯ ಕೈಗೊಳ್ಳಲು ಸೂಚಿಸಲಾಗಿದೆ. ರೂ. 1,25,000-00

ಪಂಚಾಯತ್ ನೌಕರರಿಗೆ ಸರ್ಕಾರಿ ನೌಕರರ ಸಮಾನ ವೇತನ

77 (136)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯತ್ ನೌಕರರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಗ್ರಾಮಪಂಚಾಯತಿ ನೌಕರರ ಸಂಘವು ಸರ್ಕಾರಿ ನೌಕರರ ವೇತನ, ಭತ್ಯೆಗಳನ್ನು ನೀಡುವಂತೆ ಒತ್ತಾಯಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಇ) ಬಂದಿದ್ದಲ್ಲಿ ಇವರುಗಳಿಗೆ ಸರ್ಕಾರಿ ನೌಕರರ ವೇತನ ಇತರೆ ಸೌಲಭ್ಯಗಳನ್ನು ನೀಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಎಂ.ಪಿ.ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಗ್ರಾಮ ಪಂಚಾಯಿತಿಯಿಂದ ನೇಮಕ ಮಾಡಲ್ಪಟ್ಟ ನೌಕರರ ಸಂಖ್ಯೆ ಒಟ್ಟು 26701 (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ)

ಆ) ಹೌದು.

ಇ) ಗ್ರಾಮ ಪಂಚಾಯತಿ ನೌಕರರು ಸರ್ಕಾರಿ ನೌಕರರಲ್ಲವಾದ್ದರಿಂದ ಇವರಿಗೆ ಸರ್ಕಾರಿ ನೌಕರರಿಗೆ ನೀಡುವ ಸೇವಾ ಸೌಲಭ್ಯ ಒದಗಿಸುವುದು ನಿಯಮದಲ್ಲಿ ಅವಕಾಶವಿರುವುದಿಲ್ಲ. ಆದರೆ ಗ್ರಾಮ ಪಂಚಾಯತಿ ನೌಕರರಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ. ಆರ್‌ಡಿಸಿ 102 ವಿಇಎಲ್ 90 ದಿನಾಂಕ: 10-1-94ರಲ್ಲಿ ಸಿಬ್ಬಂದಿ ಮಾದರಿಯನ್ನು ಹಾಗೂ ಅವರಿಗೆ ನೀಡಬೇಕಾಗಿರುವ ವೇತನವನ್ನು ನಿಗಧಿಪಡಿಸಲಾಗಿದೆ.

ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಯ ನೌಕರರ ವಿವರ (ವರ್ಗವಾರು)

ಕ್ರ ಸಂ.	ಜಿಲ್ಲೆ	ದ್ವಿ.ದ. ಸಹಾಯಕ	ಕ್ಲರ್ಕ್ ಕಂ ಟೈಪಿಸ್ಟ್	ಬಿಲ್ ಕಲೆಕ್ಟರ್	ಪಂಪ್ ಆಪರೇಟರ್: ವಾಚ್ ಮನ್	ಸ್ವೀಪರ್	ಜವಾನರು	ಕ್ಲರ್ಕ್ ಕಂ-ಅಕೌಂಟೆಂಟ್	ಒಟ್ಟು
1)	ಬೆಂಗಳೂರು (ನ)	-	-	163	389	70	90	2	714
2)	ಬೆಂಗಳೂರು (ಗ್ರಾ)	24	4	208	854	45	163	14	1312
3)	ಬೆಳಗಾಂ	64	53	171	758	468	374	211	2099
4)	ಬೀದರ್	1	1	188	503	200	153	9	1055
5)	ಬಿಜಾಪುರ	11	64	378	826	487	443	56	2265
6)	ಬಳ್ಳಾರಿ	-	-	181	642	155	105	112	1195
7)	ಚಿತ್ರದುರ್ಗ	-	-	191	661	178	178	12	1220
8)	ಚಿಕ್ಕಮಗಳೂರು	6	-	150	313	42	202	-	713
9)	ಧಾರವಾಡ	4	-	99	790	266	522	276	1957
10)	ದಕ್ಷಿಣಕನ್ನಡ	119	14	162	233	101	169	120	918
11)	ಗುಲ್ಬರ್ಗಾ	-	1	346	836	401	357		1949
12)	ಹಾಸನ	7	-	269	679	99	226	-	1280
13)	ಕೋಲಾರ	-	11	305	686	81	262	-	1345
14)	ಕೊಡಗು	11	7	89	109	107	55	5	383
15)	ಮೈಸೂರು	-	6	314	995	440	206	8	1969
16)	ಮಂಡ್ಯ	3	-	210	647	347	170	55	1432
17)	ರಾಯಚೂರು	-	1	278	593	346	329	25	1572
18)	ಶಿವಮೊಗ್ಗ	-	-	220	555	25	309	4	1113
19)	ತುಮಕೂರು	-	-	304	877	269	289	6	1745
20)	ಉತ್ತರ ಕನ್ನಡ	8	-	62	180	15	153	47	465
	ಒಟ್ಟು	258	162	4288	12128	4142	4755	968	26701